

ಹಿಂದೆಲ್ಲ ಬೆಳೆದ ಹೆಣ್ಣುಮಕ್ಕಳು ಲಂಗದಾವಣಿಯಿಂದ ಸೀರೆಗೆ ಸುಲಭವಾಗಿ ಬದಲಾಗುತ್ತಿದ್ದರು. ಈಗ ಲಂಗದಾವಣಿ ಜಾಗದಲ್ಲಿ ಜೀನ್ಸ್ ಬಂದಿದೆ. ಜೀನ್ಸ್ ಜಾಣೆಯರನ್ನು ನೋಡುವ ಅಮ್ಮಂದಿರಿಗೋ ತಮ್ಮ 'ಜೀನ್ಸ್'ಗಳೇ ಬದಲಾದಂತೆ ಇರುಸುಮುರುಸಾಗುತ್ತಿದೆ.

ಸುಚೇತನಾ ಎಂಟನೇ ತರಗತಿ ವಿದ್ಯಾರ್ಥಿನಿ. ಅಮ್ಮ ತನ್ನ ಗೆಳತಿಯರ ಜೊತೆಗೆ ನಡೆಸುವ ಮಾತುಕತೆ–ಚರ್ಚೆಗಳಿಗೆ ಸುಚೇತನಾ ಕೂಡ ಕಿವಿಯಾಗುತ್ತಾಳೆ. ಅಮ್ಮಂದಿರ ಚರ್ಚೆ ಏನಿರುತ್ತದೆ ಹೇಳಿ? ಈಗಿನ ಮಕ್ಕಳು ಮಾತು ಕೇಳುವುದಿಲ್ಲ. ಈ ಮಕ್ಕಳ ವಯಸ್ಸಿನಲ್ಲಿ ನಾವಿದ್ದಾಗ ಇವರಂತೆ ಇರಲಿಲ್ಲ. ಯಾವಾಗಲೂ ಕೂದಲು ಕೆದರಿಕೊಂಡಿರುವ ಈ ಹುಡುಗಿಯರ ಅವತಾರ ನೋಡಲಾಗುವುದಿಲ್ಲ. ಭುಜವೆಲ್ಲ ಕಾಣುವ ಟಾಪ್‌ಗಳನ್ನು ಹಾಕುತ್ತಾರೆ... ಇಸ್ಸೀ... ಹೀಗೆ ತಮ್ಮ ಭುಜದೆತ್ತರಕ್ಕೆ ಬೆಳೆದುನಿಂತ ಹೊಸ ತಲೆಮಾರಿನ ಹುಡುಗಿಯರನ್ನು ದೂರುತ್ತಾರೆ. ಇಂಥ ದೂರುಗಳಿಗೆಲ್ಲ ತನ್ನ ಸಹಮತವೂ ಇದೆ ಎನ್ನುವ ರೀತಿಯಲ್ಲಿ ಸುಚೇತನಾಳ ಅಮ್ಮ ಆಗೀಗ ದನಿಗೂಡಿಸುತ್ತಿದ್ದಳು. ತಾಯಿಯಂತೆ ಮಗಳು, ನೂಲಿನಂತೆ ಸೀರೆ ಎಂದು ನಂಬಿರುವ ಈ ಅಮ್ಮನಿಗೆ ತಾನು ಬೇರೆಯಲ್ಲ, ಮಗಳು ಬೇರೆಯಲ್ಲ ಎನ್ನುವ ನಂಬಿಕೆ. ಆದರೆ, ಮೊನ್ನೆ ಒಂದು ಘಟನೆ ನಡೆಯಿತು ನೋಡಿ, ಇದ್ದಕ್ಕಿದ್ದಂತೆ ಮಗಳ ಬಗ್ಗೆ ಅಮ್ಮನಿಗೆ ಸಿಟ್ಟುಬಂತು. ತನಗೆ ಗೊತ್ತಿಲ್ಲದೆಯೇ ಮಗಳು ಬೇರೊಂದು ಲೋಕವನ್ನು ಸೃಷ್ಟಿಸಿಕೊಂಡಿದ್ದಾಳೆ ಅನ್ನಿಸಿ ಮನಸ್ಸು ಸಣ್ಣದಾಯಿತು.

ಆದುದು ಇಷ್ಟೇ. 'ಲೈಫ್‌ಸ್ಟೈಲ್'ನಲ್ಲಿ ಶಾಪಿಂಗ್ ಮಾಡುವಾಗ ಅಮ್ಮ ಚೂಡಿ ಟಾಪ್‌ಗಳನ್ನೂ, ಸುಚೇತನಾ ಜೀನ್ಸ್‌ಟಾಪ್‌ಗಳನ್ನು ಆರಿಸುತ್ತ, ಟ್ರಯಲ್‌ರೂಮ್‌ಗೆ ಓಡಾಡುತ್ತ ಇದ್ದರು. ಆಯ್ಕೆ ಮುಗಿದು ಇಬ್ಬರೂ ಬಿಲ್ಲಿಂಗ್‌ಗೆ ಬರುವಾಗ ಸುಚೇತನಾಳ ಬಟ್ಟೆಗಳಲ್ಲಿ ಎರಡು ಪ್ಯಾಡೆಡ್ ಬ್ರಾಗಳಿದ್ದವು. ಅವುಗಳನ್ನು ನೋಡಿದ ತಕ್ಷಣ ಅಮ್ಮನ ಕಣ್ಣಲ್ಲಿ ಭಗ್ಗನೆ ಹತ್ತಿಕೊಂಡ ಸಿಟ್ಟು ಮನೆಗೆ ಬಂದು ವಾರವಾದರೂ ಇಳಿದಿಲ್ಲ.

**ಸ್ಮಾರ್ಟ್‌ಫೋನ್ ಕಾಲದ ಹುಡುಗಿಯರ ಅಮ್ಮಂದಿರಾಗುವುದು ಬಹುದೊಡ್ಡ ಸವಾಲೇ ಸರಿ. ತನ್ನ ಕರುಳಕುಡಿ ಬೆಳೆದ ನಂತರ ಒಮ್ಮೆಗೇ ಅಪರಿಚಿತ ತರುಣಿಯ ರೂಪದಲ್ಲಿ ಕಾಣಿಸಿದಾಗ ಅಮ್ಮಂದಿರು ಬೆಚ್ಚುವುದು ಸಹಜ.**

'ಅಲ್ಲ, ಪ್ಯಾಡೆಡ್ ಹಾಕ್ಕೊಳ್ಳೋದು ಏನಕ್ಕೆ? ಚೆನ್ನಾಗೇ ಇದ್ದೀಯಲ್ಲ. ಎದೆಯೇ ಇಲ್ಲವೆಂದರೆ ಸ್ವಲ್ಪ ಮುಜುಗರ ಆಗಬಹುದೇನೋ? ಆದರೆ, ಮುಜುಗರ ಆಗಬಾರದು ಎಂದು ಹೇಳುವವಳು ನಾನು. ಆದರೆ ನೀ ಎಂತಕೆ ಇದನ್ನು ತಕೊಂಡು ಬಂದಿ?'

ಅಮ್ಮನ ಪ್ರಶ್ನೆಗಳ ರಾಶಿ ನೋಡಿ ಸುಚೇತನಾ ಕಂಗಾಲು. ತನ್ನ ಗೆಳತಿಯರು ಧರಿಸುವ ಪ್ಯಾಡೆಡ್ ಬ್ರಾ ತಾನು ಹಾಕಿದರೆ ಏನು ತಪ್ಪು ಎನ್ನುವುದು ಅರಿವಾಗದೆ ಸುಚೇತನಾ ಕಕ್ಕಾಬಿಕ್ಕಿಯಾದಳು. 'ಕೆಲವು ಡ್ರೆಸ್‌ಗಳಿಗೆ ಅಂತಹ ಬ್ರಾ ಬೇಕಾಗುತ್ತದೆ ಅಮ್ಮ' ಎಂದು ಹೇಳಲು ಹೊರಟರೆ ಈ ಅಮ್ಮ ಹೌಹಾರಿ ಮತ್ತೆ ಬೈಯುವುದು ಖಚಿತ ಎಂದುಕೊಂಡು ಸುಮ್ಮನಾದಳು. 'ಎದೆಯೇ ಕಾಣಬಾರದು ಎಂದು ಬಾಳಿದವರು ನಾವು. ಆದರೆ ಹಿಂದಿನಂತೆ ಈಗಲೂ ಅಷ್ಟೆಲ್ಲ ಕಟುವಾಗಿ ಇರುವುದು ಸರಿಯಲ್ಲ ಎನ್ನುವುದು ಗೊತ್ತಿದೆ. ಹಾಗೆಂದುಕೊಂಡು ಇಲ್ಲದ್ದನ್ನು ಪ್ರದರ್ಶಿಸುದು ಸರಿಯಲ್ಲ. ಅದರ ಅಗತ್ಯವೂ ಇಲ್ಲ' ಎಂದು ಅಮ್ಮ ತಾರಕ ದನಿಯಲ್ಲಿ ಮತ್ತೆ ದಬಾಯಿಸಲು ಶುರು ಮಾಡಿದಳು. ಮಾತುಗಳ ದಾಳಿಯಿಂದ ಮಂಕಾದ ಸುಚೇತನಾಳಿಗೆ, ತನ್ನಮ್ಮ ಇರುವುದು ಯಾವ ಕಾಲದಲ್ಲಿ ಎನ್ನಿಸಿತು.

ಹೌದಲ್ಲವೇ? ಒಂದು ಕಾಲದಲ್ಲಿ ತಾನು ಆಧುನಿಕ ಎಂದು ಭಾವಿಸಿದ್ದ ತರುಣಿಯರು, ಅಮ್ಮಂದಿರಾಗಿ ಬೆಳೆದ ಮಕ್ಕಳ ಕಣ್ಣಲ್ಲಿ ಔಟ್‌ಡೇಟೆಡ್